SC Criminal 60/2020
PW: 05
CW: 14

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ

**SESSIONS CASE : 60/2020**

**ಪ್ರಾ.ಸಾ. 05**

**ದೋ.ಸಾ. 14**

| | | |
|---|---|---|
| ಸಾಕ್ಷಿಯ ಹೆಸರು | : | ರಾಜು |
| ತಂದೆಯ ಹೆಸರು | : | ಮಲ್ಲಪ್ಪ |
| ವಯಸ್ಸು | : | 28 ವರ್ಷ |
| ಉದ್ಯೋಗ | : | ಆಟೋ ಚಾಲಕ |
| ವಾಸ | : | ಕಮಲಾಪುರ ಗ್ರಾಮ, ಗೌರಿಬಿದನೂರು ತಾಲ್ಲೂಕು |

**ದಿನಾಂಕ 10.12.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1). ಮೃತ ರಾಧಮ್ಮ ನನಗೆ ಗೊತ್ತು. ಚಾಸಾ–1 ರಿಂದ 13, 15 ರಿಂದ 25 ನನಗೆ ಗೊತ್ತು. ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು. ನಾನು ಆಟೋ ಚಾಲಕನಾಗಿದ್ದು, ನನ್ನ ಆಟೋವನ್ನು ಅಲ್ಲೀಪುರ ಸ್ಟ್ಯಾಂಡ್ ನಲ್ಲಿ ನಿಲ್ಲಿಸುತ್ತೇನೆ.

2). ಕೆಲವು ವರ್ಷಗಳ ಹಿಂದೆ ರಾಧಮ್ಮರವರ ಅಣ್ಣ ರಾತ್ರಿ ಸುಮಾರು 2.00 ಗಂಟೆಯ ಸಮಯದಲ್ಲಿ ನನಗೆ ಕರೆ ಮಾಡಿ ಆಸ್ಪತ್ರೆಗೆ ಹೋಗಬೇಕು ಬಾ ಎಂದು ಹೇಳಿರುತ್ತಾರೆ. ನಂತರ ನಾನು ರಾಧಮ್ಮರವರ ಮನೆಗೆ ಹೋಗಿ ಆಕೆಯನ್ನು ನನ್ನ ಆಟೋವಿನಲ್ಲಿ ಗೌರಿಬಿದನೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ರಾಧಮ್ಮ ಜೊತೆ ಆಕೆಯ ತಾಯಿ ಮತ್ತು ಅವರ ಅಣ್ಣ ಬಂದಿರುತ್ತಾರೆ. ಆಸ್ಪತ್ರೆಯಲ್ಲಿ ಸದರಿಯವರನ್ನು ಬಿಟ್ಟು ನಾನು ವಾಪಸ್ ಬಂದಿರುತ್ತೇನೆ. ಮೃತ ರಾಧಮ್ಮ ಯಾವ ಕಾರಣದಿಂದ ತೀರಿಕೊಂಡಳು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಮೃತ ರಾಧಮ್ಮಳ ಸಾವಿಗೆ ಯಾರು ಕಾರಣ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

SC Criminal 60/2020
PW: 05
CW: 14

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು.)**

**ಪಾಟೀಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

3). ದಿಃ06.01.2020 ರಂದು ರಾತ್ರಿ 12.40 ಗಂಟೆಯ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ನಮ್ಮ ಗ್ರಾಮದ ವಾಸಿಯಾದ ಗೋಪಾಲಕೃಷ್ಣರವರು ಬಂದು ತನ್ನ ತಂಗಿ ಕುಮಾರಿ ರಾಧರವರು ಯಾವುದೋ ವಿಷವನ್ನು ಕುಡಿದು ವಾಂತಿಯನ್ನು ಮಾಡಿಕೊಳ್ಳುತ್ತಿದ್ದಾಳೆ, ಬೇಗನೇ ಅವಳನ್ನು ಗೌರಿಬಿದನೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು, ಆಟೋ ತಗೆದುಕೊಂಡು ಬರುವಂತೆ ತಿಳಿಸಿದನು ಎಂದರೆ ಸರಿ. ತಕ್ಷಣ ನಾನು ನನ್ನ ಆಟೋ ತೆಗೆದುಕೊಂಡು ಕೊಂಡಪ್ಪರವರ ಮನೆ ಬಳಿ ಹೋಗಿ ಅವರ ಮನೆ ಬಳಿ ಕುಮಾರಿ ರಾಧರವರು ವಾಂತಿ ಮಾಡಿಕೊಳ್ಳುತ್ತಿದ್ದ ರಾಧರವರನ್ನು ಆಟೋದಲ್ಲಿ ಹತ್ತಿಸಿಕೊಂಡು ಅವರ ಜೊತೆಯಲ್ಲಿ ಅವರ ತಂದೆ ಕೊಂಡಪ್ಪ, ತಾಯಿ ರಾಮಾಂಜಿಯಮ್ಮ ಹಾಗೂ ಅಣ್ಣ ಗೋಪಾಲಕೃಷ್ಣರವರು ಬಂದರು. ನಾನು ಆಟೋವನ್ನು ಚಾಲನೆ ಮಾಡಿಕೊಂಡು ಗೌರಿಬಿದನೂರಿನ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ ಎಂದರೆ ಸರಿ. ಕುಮಾರಿ ರಾಧಳನ್ನು ಪರೀಕ್ಷಿಸಿದ ವೈದ್ಯರು ಹೆಚ್ಚಿನ ಚಿಕಿತ್ಸೆಗಾಗಿ ಚಿಕ್ಕಬಳ್ಳಾಪುರ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು ಎಂದು ಹೇಳಿರುತ್ತಾರೆ ಎಂದರೆ ಸರಿ. ನಂತರ ಚಿಕ್ಕಬಳ್ಳಾಪುರ ವೈದ್ಯರು ರಾಧರವನ್ನು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು, ಹಾಗೂ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಫಲಕಾರಿಯಾಗದೇ ದಿನಾಂಕಃ08-01-2020 ರಂದು ಮೃತಪಟ್ಟಿರುವ ವಿಚಾರ ಗೊತ್ತಾಯಿತು ಎಂದರೆ ಸರಿ.

4). ನಂತರ ಆರೋಪಿ ವೆಂಕಟೇಶನು ರಾಧಮ್ಮಳನ್ನು ಪ್ರೀತಿಸುತ್ತಿದ್ದು, ಕುಮಾರಿ ರಾಧಳಿಗೆ ಒಂದು ಸಿಮ್ ನ್ನು ತೆಗೆದುಕೊಟ್ಟು, ಸದರಿ ಸಿಮ್ ಗೆ ಕರೆ ಮಾಡಿ ಮಾತನಾಡುತ್ತಿದ್ದನು, ಸ್ವಲ್ಪ ದಿನಗಳ ನಂತರ ಆರೋಪಿ ರಾಧಳ ಮೊಬೈಲ್ ಸಂಖ್ಯೆಗೆ ಫೋನ್ ಮಾಡಿದಾಗ ಬ್ಯುಸಿ ಬರುತ್ತಿದ್ದರಿಂದ ಕುಮಾರಿ ರಾಧ ಆರೋಪಿ ವೆಂಕಟೇಶನನ್ನು ಬಿಟ್ಟು ಬೇರೆ ಯಾರೋ ಹುಡುಗನನ್ನು ಪ್ರೀತಿಸುತ್ತಿದ್ದಾಳೆ, ಅವರು ರಾಧಳ ಮೊಬೈಲ್ ನಂಬರ್ ಗೆ ಫೋನ್ ಮಾಡುತ್ತಿದ್ದಾರೆ ಎಂದು ಅನುಮಾನಪಟ್ಟು ತನಗೆ ಸಿಗದ ರಾಧ ಬೇರೆ ಯಾರಿಗೂ ಸಿಗಬಾರದು ಎಂದು ರಾಧಾಳನ್ನು ಕೊಲೆ ಮಾಡಲು ತೀರ್ಮಾನಿಸಿ, ಆರೋಪಿ ವೆಂಕಟೇಶನು ದಿಃ06.01.2020 ರಂದು ರಾತ್ರಿಯಲ್ಲಿ ಇಲಿ ಪಾಶಾಣವನ್ನು ಬಲವಂತವಾಗಿ ರಾಧಳಿಗೆ ಕುಡಿಸಿ, ಅವನು ಸಹ ಕುಡಿದಂತೆ ನಟಿಸಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಭಾಗವನ್ನು ನಿಪಿ–12 ಎಂದು ಗುರುತಿಸಲಾಯಿತು. ಕುಮಾರಿ ರಾಧ ಮತ್ತು ಆರೋಪಿ ವೆಂಕಟೇಶ್ ಇಲಿ ಪಾಶಾಣವನ್ನು ಕುಡಿದಿದ್ದೇವೆ ಎಂದು ಆರೋಪಿಯು ನಮ್ಮ ಗ್ರಾಮದ ಮಹೇಂದ್ರ ಎಂಬುವವರಿಗೆ ಫೋನ್ ಮಾಡಿ ತಿಳಿಸಿದ್ದು, ಮಹೇಂದ್ರನು ವೆಂಕಟೇಶನ ಮನೆಯವರೊಂದಿಗೆ ಸೇರಿ ವೆಂಕಟೇಶನನ್ನು ಗೌರಿಬಿದನೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗೆ ದಾಖಲಿಸಿರುತ್ತಾರೆ ಎಂದರೆ ಸರಿ. ನಂತರ ಕುಮಾರಿ ರಾಧಳನ್ನು ಅವರ ತಂದೆ ನನ್ನ ಆಟೋದಲ್ಲಿ ಗೌರಿಬಿದನೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ ಆರೋಪಿ ಪರ ಶ್ರೀ ಕೆ.ಎಸ್.ಎನ್ ವಕೀಲರಿಂದಃ</u>**

5). ಗೋಪಾಲಕೃಷ್ಣರವರ ಮನೆಗೆ ಹಾಗೂ ನಮ್ಮ ಮನೆಗೂ ಸುಮಾರು ಅರ್ಧ ಕಿಲೋಮೀಟರ್ ಅಂತರ ಇರುತ್ತದೆ. ನಮ್ಮ ಊರಿನಲ್ಲಿ ಆಟೋ ಓಡಿಸುವವರು ಹಲವಾರು ಜನ ಇರುತ್ತಾರೆ ಎಂದರೆ ಸರಿ. ನಮ್ಮ ಮನೆಗೆ ಹೋಗುವ ದಾರಿಯಲ್ಲೇ

ಹಲವಾರು ಆಟೋ ಚಾಲಕರು ಇದ್ದಾರೆ ಎಂದರೆ ಸರಿ. ಗೋಪಾಲರವರು ನನಗೆ ಫೋನ್ ಮಾಡಿ ಕರೆದಿರುತ್ತಾರೆ. ಗೋಪಾಲರವರು ನನಗೆ ಫೋನ್ ಮಾಡಿದಾಗ ರಾಧಳು ವಿಷ ಕುಡಿದಿರುವ ವಿಚಾರ ನನಗೆ ಹೇಳಿರುವುದಿಲ್ಲ. ರಾಧಳನ್ನು ಗೌರಿಬಿದನೂರು ಆಸ್ಪತ್ರೆಯಿಂದ ಬೇರೆ ಬೇರೆ ಯಾವ ಯಾವ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂಬ ಬಗ್ಗೆ ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಚಿಕ್ಕಬಳ್ಳಾಪುರಕ್ಕೆ ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಚಿಕ್ಕಬಳ್ಳಾಪುರ ದಿಂದ ಯಾವ ಆಸ್ಪತ್ರೆಗೆ ರಾಧಳನ್ನು ಕರೆದುಕೊಂಡು ಹೋಗಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ.

6). ನನಗೂ ಹಾಗೂ ಗೋಪಾಲಕೃಷ್ಣರವರಿಗೆ ಯಾವುದೇ ಸಂಬಂಧ ಇರುವುದಿಲ್ಲ. ರಾಧಳು ಮೊಬೈಲ್ ಉಪಯೋಗಿಸುತ್ತಿದ್ದಳೋ ಇಲ್ಲವೋ ಅದರ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿ ವೆಂಕಟೇಶ್ ಹಾಗೂ ರಾಧ ಒಟ್ಟಿಗೆ ಇದ್ದದನ್ನು ನಾನು ನೋಡಿರುವುದಿಲ್ಲ. ಪೊಲೀಸರು ನನ್ನನ್ನು ಕರೆದು ವಿಚಾರಣೆ ಮಾಡಿರುವುದಿಲ್ಲ. ವೆಂಕಟೇಶ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಬಗ್ಗೆ ನನಗೆ ಮಹೇಂದ್ರರವರು ಫೋನ್ ಮಾಡಿ ತಿಳಿಸಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನಾನು ರಾಧಳನ್ನು ಗೌರಿಬಿದನೂರಿನ ಸರ್ಕಾರಿ ಆಸ್ಪತ್ರೆಗೆ ನನ್ನ ಆಟೋವಿನಲ್ಲಿ ಕರೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

**(ಎನ್.ವಿ. ಭವಾನಿ)**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಬಳ್ಳಾಪುರ.